ಆ) ಆ ಪೈಕಿ ಸ್ವಂತ ಕಟ್ಟಡ ಹೊಂದಿರುವ ಕೇಂದ್ರಗಳಾವುವು; ಸ್ವಂತ ಕಟ್ಟಡ ಹೊಂದಿಲ್ಲ ದಿರುವುವು ಯಾವುದು;

ಇ) ಸ್ವಂತ ಕಟ್ಟಡ ಹೊಂದಿಲ್ಲದ ಘಟಕ / ಕೇಂದ್ರಗಳಿಗೆ ಸ್ವಂತ ಕಟ್ಟಡ ಕಲ್ಪಿಸಲು ಸರ್ಕಾರ ಈ ವರೆಗೆ ಯಾವ ರೀತಿಯ ಕ್ರಮ ಕೈಗೊಂಡಿದೆ ಹಾಗೂ ಕೈಗೊಳ್ಳಲಿದೆ ವಿವರ ಒದಗಿಸುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 15 ಪ್ರಾ.ಆ. ಘಟಕಗಳು, 5 ಹೆರಿಗೆ ಆಸ್ಪತ್ರೆಗಳು ಹಾಗೂ 2 ನಗರ ಪ್ರಾ.ಆ. ಕೇಂದ್ರಗಳು ಇರುತ್ತವೆ.

ಆ) ಪ್ರಾ.ಆ. ಘಟಕಗಳಾದ ಕೃಷ್ಣಮೂರ್ತಿಪುರಂ, ವಿಶ್ವೇಶ್ವರ ನಗರ ಹಾಗೂ ಉದಯಗಿರಿಯಲ್ಲಿ ಸ್ವಂತ ಕಟ್ಟಡ ಇರುವುದಿಲ್ಲ.

ಇ) ಕೃಷ್ಣಮೂರ್ತಿ ಪುರಂನ ಪ್ರಾ.ಆ. ಘಟಕದ ಕಾರ್ಯಸ್ಥಾನವನ್ನು ಮೈಸೂರಿನ ಗಾಂಧೀನಗರ ಬಡಾವಣೆಯಲ್ಲಿ ಆಸ್ಪತ್ರೆಯ ಉದ್ದೇಶಕ್ಕಾಗಿ ನೂತನವಾಗಿ ಕಟ್ಟಿರುವ ಕಟ್ಟಡಕ್ಕೆ ಬದಲಾಯಿಸಲು ಜಿಲ್ಲಾ ಪಂಚಾಯತ್‌ಗೆ ಕೋರಲಾಗಿದೆ.

ವಿಶ್ವೇಶ್ವರ ನಗರದ ಪ್ರಾ.ಆ. ಘಟಕವು ನಗರ ಪಾಲಿಕೆ ಕಟ್ಟಡದಲ್ಲಿದೆ.

ಉದಯಗಿರಿ ಪ್ರಾ.ಆ. ಘಟಕದ ಕಾರ್ಯಸ್ಥಾನವನ್ನು ಮೈಸೂರಿನ ಕುಂಬಾರಕೊಪ್ಪಲು ಬಡಾವಣೆಯಲ್ಲಿ ಲೋಕಸಭಾ ಸದಸ್ಯರ ನಿಧಿಯಿಂದ ನಿರ್ಮಿಸಿರುವ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲು ಯೋಜಿಸಲಾಗಿದೆ.

569 (682) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳ ಸಂಖ್ಯೆ ಎಷ್ಟು;

ಆ) ಆ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳ ಪೈಕಿ ಯಾವ ಯಾವ ಘಟಕ / ಕೇಂದ್ರಗಳಲ್ಲಿ ವೈದ್ಯಕೀಯ ಸಿಬ್ಬಂದಿಗಳ ಕೊರತೆ ಇದೆ. ಯಾವ ಯಾವ ಘಟಕಗಳಲ್ಲಿ ಯಾವ ಯಾವ ಹುದ್ದೆಗಳ ಕೊರತೆ ಇದೆ;

ಇ) ಸಿಬ್ಬಂದಿ ಕೊರತೆಯಿಂದಾಗಿ ರೋಗಿಗಳ ಚಿಕಿತ್ಸೆಗೆ ತೊಂದರೆಯಾಗಿಲ್ಲವೇ; ಸಿಬ್ಬಂದಿ ಕೊರತೆ ನೀಗಿಸಲು ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ;

ಈ) ಹಾಗಿಲ್ಲದಿದ್ದಲ್ಲಿ, ಕೈಗೊಳ್ಳಲಿರುವ ಕ್ರಮಗಳಾವುವು? (ವಿವರ ಒದಗಿಸುವುದು)

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮೈಸೂರು ನಗರ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಘಟಕ –15, ಪ್ರಾಥಮಿಕ ಆರೋಗ್ಯ ಕೇಂದ್ರ –02, ಹೆರಿಗೆ ಆಸ್ಪತ್ರೆ –5.

ಆ) ಪ್ರಾಥಮಿಕ ಆರೋಗ್ಯ ಘಟಕ ಮತ್ತು ಕೇಂದ್ರಗಳಲ್ಲಿ ವೈದ್ಯಕೀಯ ಸಿಬ್ಬಂದಿ ಕೊರತೆ ಇರುವುದಿಲ್ಲ.

ಈ ಕೆಳಕಂಡ ಆಸ್ಪತ್ರೆಗಳು ಮೈಸೂರು ನಗರ ಪಾಲಿಕೆಯಿಂದ ಹಸ್ತಾಂತರಗೊಂಡಿದ್ದು, ಈ ಆಸ್ಪತ್ರೆಗಳಲ್ಲಿ ಗ್ರೂಪ್–ಡಿ ಹುದ್ದೆಗಳು ಮಂಜೂರಾಗಿರುವುದಿಲ್ಲ.

1. ಪ್ರಾ.ಆ.ಘಟಕ, ಗಿರಿಭೂಮಿಪಾಳ್ಯ.
2. ಪ್ರಾ.ಆ.ಘಟಕ, ಶಾಂತಿನಗರ.
3. ಪ್ರಾ.ಆ.ಘಟಕ, ರಾಜೇಂದ್ರನಗರ.
4. ಪ್ರಾ.ಆ.ಘಟಕ, ಬನ್ನಿಮಂಟಪ.
5. ಪ್ರಾ.ಆ.ಘಟಕ, ತೊಣಚಿಕೊಪ್ಪಲು.
6. ಹೆರಿಗೆ ಆಸ್ಪತ್ರೆ, ಕ್ಯಾತಮಾರನಹಳ್ಳಿ.
7. ಹೆರಿಗೆ ಆಸ್ಪತ್ರೆ, ನಾಚನಹಳ್ಳಿಪಾಳ್ಯ.

ಇ) ಗ್ರೂಪ್–ಡಿ ಹುದ್ದೆಗಳನ್ನು Non-Clinical ಸೇವೆ ಅಡಿಯಲ್ಲಿ ಇವರ ಸೇವೆಯನ್ನು ಬಳಸಿಕೊಳ್ಳಲಾಗಿದೆ. ಹಾಗೂ ಅನ್ಯಪರ ಸೇವೆಯ ಮೇಲೆ ಗ್ರೂಪ್–ಡಿ ನೌಕರರನ್ನು ಸಹ ನೇಮಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

570 (683) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ಇ.ಎಸ್.ಐ. ಆಸ್ಪತ್ರೆಗಳಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊರತೆ ಇರುವ ಹುದ್ದೆಗಳಾವುವು;

ಇ) ಸಿಬ್ಬಂದಿಗಳ ಕೊರತೆಯಿಂದಾಗಿ ರೋಗಿಗಳಿಗೆ ಸಮರ್ಪಕ ಚಿಕಿತ್ಸೆ ದೊರಕುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸಿಬ್ಬಂದಿಗಳ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು; ಎಷ್ಟರ ನೀಡುವುದು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು) :

ಅ) ಹೌದು.

ಆ)

1.	ಶಸ್ತ್ರ ಚಿಕಿತ್ಸಕರು	05 ಹುದ್ದೆಗಳು
2.	ಉಪಶಸ್ತ್ರ ಚಿಕಿತ್ಸಕರು	08 ಹುದ್ದೆಗಳು